# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **65** |
| ಸದಸ್ಯರ ಹೆಸರು | : | **ಶ್ರೀ. ಶಿವಕುಮಾರ್ ಕೆ (ನಾಮನಿರ್ದೇಶನ ಹೊಂದಿದವರು)** |
| ಉತ್ತರಿಸುವ ದಿನಾಂಕ | : | **27/01/2026** |
| ಉತ್ತರಿಸುವ ಸಚಿವರು | : | **ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು** |

| | ಪ್ರಶ್ನೆ | ಉತ್ತರ |
|---|---|---|
| ಅ | ಮೈಸೂರು ಮಹಾನಗರ ಪಾಲಿಕೆಯನ್ನು ಗ್ರೇಟರ್ ಮೈಸೂರನ್ನಾಗಿ ಸರ್ಕಾರ ರೂಪಿಸಿದ್ದು, ಇದು ಎಷ್ಟು ಕಿ.ಮಿ ವ್ಯಾಪ್ತಿಗೆ ವಿಸ್ತರಣೆಗೊಳ್ಳಲಿದೆ; | ಹಾಲಿ ಮೈಸೂರು ಮಹಾನಗರ ಪಾಲಿಕೆಯೊಂದಿಗೆ ಈ ಕೆಳಕಂಡ ಪ್ರದೇಶಗಳನ್ನು ಸೇರ್ಪಡೆಗೊಳಿಸಿ ಬೃಹತ್ ಮೈಸೂರು ಮಹಾನಗರ ಪಾಲಿಕೆಯನ್ನು ರಚಿಸಲು ಉದ್ದೇಶಿಸಲಾಗಿರುತ್ತದೆ;<br>a) ಹೂಟಗಳ್ಳಿ ನಗರಸಭೆ,<br>b) ಶ್ರೀರಾಂಪುರ, ರಮ್ಮನಹಳ್ಳಿ, ಕಡಕೊಳ & ಬೋಗಾದಿ ಪಟ್ಟಣ ಪಂಚಾಯಿತಿಗಳು,<br>c) ಚಾಮುಂಡಿಬೆಟ್ಟ ಗ್ರಾಮ ಪಂಚಾಯಿತಿ (ಪೂರ್ಣ),<br>d) ಆಲನಹಳ್ಳಿ ಗ್ರಾಮ ಪಂಚಾಯಿತಿಯ ಆಲನಹಳ್ಳಿ & ಲಲಿತಾದ್ರಿಪುರ ಗ್ರಾಮಗಳು,<br>e) ಸಿದ್ದಲಿಂಗಪುರ ಗ್ರಾಮ ಪಂಚಾಯಿತಿಯ ಸಿದ್ದಲಿಂಗಪುರ, ಬೆಲವತ್ತ, ಕೆಸರೆ, ಮೇಟಗಳ್ಳಿ ಗ್ರಾಮಗಳು,<br>f) ಇಲವಾಲ ಗ್ರಾಮ ಪಂಚಾಯಿತಿಯ ಇಲವಾಲ, ಕರಕನಹಳ್ಳಿ, ಮೈದನಹಳ್ಳಿ, ಮೇಗಳಾಪುರ ಗ್ರಾಮಗಳು,<br>g) ಧನಗಳ್ಳಿ ಗ್ರಾಮ ಪಂಚಾಯಿತಿಯ ಧನಗಳ್ಳಿ, ಯಡಹಳ್ಳಿ, ಕೆಂಚಲಗೂಡು, ಹಾಲಾಳು, ಚೌಡಹಳ್ಳಿ (ಕೋಟೆಹುಂಡಿ) ಗ್ರಾಮಗಳು,<br>h) ಮಲ್ಲಹಳ್ಳಿ (ಬೀರಿಹುಂಡಿ) ಗ್ರಾಮ ಪಂಚಾಯಿತಿಯ ಮಲ್ಲಹಳ್ಳಿ–ಬೀರಿಹುಂಡಿ, ಗೋಹಳ್ಳಿ, ಕುಮಾರಬೀಡು, ಬಲ್ಲಹಳ್ಳಿ ಗ್ರಾಮಗಳು,<br>i) ನಾಗನಹಳ್ಳಿ ಗ್ರಾಮ ಪಂಚಾಯಿತಿಯ ಶ್ಯಾದನಹಳ್ಳಿ ಮತ್ತು<br>j) ನಾಗವಾಲ ಗ್ರಾಮ ಪಂಚಾಯಿತಿಯ ನಾಗವಾಲ, ಬೊಮ್ಮನಹಳ್ಳಿ, ಹುಯಿಲಾಳು ಗ್ರಾಮಗಳು |
| ಆ | ಗ್ರೇಟರ್ ಮೈಸೂರಿಗೆ ಎಷ್ಟು ಬಡಾವಣೆಗಳು ಹಾಗೂ ಗ್ರಾಮಗಳು ಸೇರ್ಪಡೆಗೊಳ್ಳಲಿದೆ; | |
| ಇ | ಗ್ರೇಟರ್ ಮೈಸೂರು ನಿರ್ಮಾಣದಿಂದ ಸರ್ಕಾರದ ಅನುದಾನ ಹಾಗೂ ತೆರಿಗೆ ಸಂಗ್ರಹವು ಎಷ್ಟು ಹೆಚ್ಚಾಗಲಿದೆ, ಎಂದು ಅಂದಾಜಿಸಲಾಗಿದೆ? | |

| | | |
|---|---|---|
| | | ಮೇಲೆ ತಿಳಿಸಿರುವ ಎಲ್ಲಾ ಪ್ರದೇಶಗಳು ಸೇರಿದಂತೆ ಒಟ್ಟು 341.44 ಚ.ಕೀ.ಮಿ ವಿಸ್ತೀರ್ಣದ ಪ್ರದೇಶದಿಂದ ಬೃಹತ್ ಮೈಸೂರು ಮಹಾನಗರ ಪಾಲಿಕೆಯನ್ನು ರಚಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 294 ಎಂಎಲ್ ಆರ್ 2025, ದಿನಾಂಕ: 08/01/2026 ರನ್ವಯ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಈ ಪ್ರಸ್ತಾವನೆಯನ್ನು ಇತ್ಯರ್ಥಪಡಿಸಿ ಅಂತಿಮ ಅಧಿಸೂಚನೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸುವ ಮೂಲಕ ಬೃಹತ್ ಮೈಸೂರು ಮಹಾನಗರ ಪಾಲಿಕೆಯೆಂದು ಉದ್ಘೋಷಿಸಿದ ನಂತರ ಆಗಿನ ಸ್ಥಿತಿಗತಿ, ನಿಯಮಗಳನ್ವಯ ಸರ್ಕಾರದಿಂದ ಬಿಡುಗಡೆಯಾಗಬಹುದಾದ ಅನುದಾನ ಹಾಗೂ ಒಟ್ಟಾರೆ ಪ್ರದೇಶದಿಂದ ಆಗಬಹುದಾದ ತೆರಿಗೆ ಸಂಗ್ರಹದ ಪ್ರಮಾಣವನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. |

**ಸಂಖ್ಯೆ:ನಅಇ 02 ಎಲ್‌ಸಿಕ್ಯೂ 2026**

(ರಹೀಂ ಖಾನ್)

**ಪೌರಾಡಳಿತ ಹಾಗೂ ಹಜ್ ಸಚಿವರು**